ದಿನಾಂಕಃ **26.10.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಶ್ರೀ **RR** ವಕೀಲರಿಂದಃ

ನಾನು ಈಗ ನಿವೃತ್ತಿ ಹೊಂದಿರುತ್ತೇನೆ, ಏನು ಕೆಲಸ ಮಾಡುತ್ತಿಲ್ಲ. ನನ್ನ ಮೊದಲನೇ ಹೆಂಡತಿ ಹೆಸರು ಗಂಗಮ್ಮ, ಎರಡನೇ ಹೆಂಡತಿ ಹೆಸರು ಸಂಜೀವಮ್ಮ. ಸಂಜೀವಮ್ಮ ನನ್ನ ಜೊತೆ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ನಾನು ರೊಪ್ಪ ಕ್ಕೆ ಬಂದು ಹೋಗುತ್ತಿರುತ್ತೇನೆ. ದಾವಾ ಸ್ವತ್ತುಗಳು **1** ರಿಂದ **3** ನೇ ಪ್ರತಿವಾದಿವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ, ನಮಗೆ ಸೇರಿರುತ್ತದೆ. ನನ್ನ ಮೊದಲನೇ ಹೆಂಡತಿ ಗಂಗಮ್ಮ ರವರ ಹೆಸರಿನಲ್ಲಿ ಇರುತ್ತದೆ.

ದಾವಾ ಐಟಂ ನಂ.**2** ಕ್ಕೆ ಗಂಗಮ್ಮ ರವರು **1** ಮತ್ತು **2** ನೇ ಪ್ರತಿವಾದಿಗಳ ಪರವಾಗಿ ವಿಲ್ ಬರೆದಿರುತ್ತಾರೆ ಎಂದರೆ ಸರಿಯಲ್ಲ. ದಿ.**05.05.2015** ರಂದು ಗಂಗಮ್ಮ ರವರು ತೀರಿಕೊಂಡಿರುತ್ತಾರೆ. **1** ನೇ ಪ್ರತಿವಾದಿ ಗಂಗಮ್ಮ ರವರ ತಮ್ಮ ಎಂದರೆ ಸರಿ. ದಾವಾ ಸ್ವತ್ತುಗಳು ಈಗಲೂ ಗಂಗಮ್ಮರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಐಟಂ ನಂ.**1** ರಲ್ಲಿ **3** ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ, ನಾನು ಬಾಡಿಗೆಗೆ ಕೊಟ್ಟಿರುತ್ತೇನೆ. ದಾವಾ ಐಟಂ ನಂ.**2** ರಲ್ಲಿ **1** ಮತ್ತು **2** ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಗಂಗಮ್ಮ ಅಥವಾ ಪ್ರತಿವಾದಿಗಳಿಗೂ ಮತ್ತು ನನಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ, ಗಂಗಮ್ಮ ನನ್ನ ಮೊದಲನೇ ಹೆಂಡತಿ. ಗಂಗಮ್ಮ ರವರ ಅಂತಿಮ ಕ್ರಿಯೆಯನ್ನು ಪ್ರತಿವಾದಿಗಳು ಮಾಡಿರುತ್ತಾರೆ ಎಂದರೆ ಸರಿಯಲ್ಲ, ನಾನೇ ಮಾಡಿರುತ್ತೇನೆ. ದಾವಾ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲದೆ ಇದ್ದರೂ ಸಾಧ್ಯವಾದರೆ ಆಸ್ತಿ ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ